DAY & DATE: SUNDAY, OCTOBER 25th, 2026

Matter: Graduation Day - 2026

As appeared in the Newspapers:

VIJAYAVANI
(Bengaluru City Express, Page No. 8)

ವಿಜಯವಾಣಿ
ಕನ್ನಡಿಗರ ಧ್ವನಿ
ನಂ. 1 ಕನ್ನಡ ದಿನಪತ್ರಿಕೆ

ಜ್ಞಾನವನ್ನು ಬಳಸುವ ಸಾಮರ್ಥ್ಯ ಬೆಳೆಸಿಕೊಳ್ಳಿ

ದೇವೇಂದ್ರ ಮಲ್ಹೋತ್ರ ಸಲಹೆ | ಬಿಎನ್‌ಎಂಐಟಿಯಲ್ಲಿ 576 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಶಿಕ್ಷಣವು ಕೇವಲ ಪದವಿ ಪಡೆಯುವುದಕ್ಕೆ ಮಾತ್ರ ಸೀಮಿತವಾಗಬಾರದು. ಕಲಿತ ಜ್ಞಾನವನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ವಿಪ್ರೋ ಕಂಪನಿಯ ಮುಖ್ಯ ಕಾರ್ಯಾಚರಣೆ ಅಧಿಕಾರಿ (ಸಿಒಒ) ದೇವೇಂದ್ರ ಮಲ್ಹೋತ್ರ ಹೇಳಿದ್ದಾರೆ.

ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಬಿಎನ್ ಎಂಐಟಿ) ಆಯೋಜಿಸಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ತಾಂತ್ರಿಕ ಜ್ಞಾನ, ಸಂವಹನ ಕೌಶಲ, ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯ ಹಾಗೂ ತಂಡವಾಗಿ ಕೆಲಸ ಮಾಡುವ ಗುಣಗಳು ಅತ್ಯಂತ ಮುಖ್ಯವಾಗಿವೆ. ತಂತ್ರಜ್ಞಾನ ಕ್ಷೇತ್ರವು ನಿರಂತರವಾಗಿ ಬದಲಾಗುತ್ತಿದ್ದು, ಕೃತಕ ಬುದ್ಧಿಮತ್ತೆ (ಎ.ಐ.) ಸೇರಿ ಹೊಸ ತಂತ್ರಜ್ಞಾನಗಳು ಉದ್ಯೋಗ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗಳನ್ನು ತರುತ್ತಿವೆ. ಈ ಬದಲಾವಣೆಗಳಿಗೆ ಹೊಂದಿಕೊಳ್ಳಲು ವಿದ್ಯಾರ್ಥಿಗಳು ನಿರಂತರವಾಗಿ ಕಲಿಯುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.



ವಿಜಯವಾಣಿ ಚಿತ್ರ

ಬಿಎನ್‌ಎಂಐಟಿ ಆಯೋಜಿಸಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ದೇವೇಂದ್ರ ಮಲ್ಹೋತ್ರ, ನಾರಾಯಣ ರಾವ್ ಮಾನೆ, ಈಶ್ವರ್ ಮಾನೆ, ಡಾ.ಬಿ.ಕೆ. ಜಯಣ್ಣ, ಡಾ.ಎಸ್. ವೈ. ಕುಲಕರ್ಣಿ ಮತ್ತಿತರರಿದ್ದರು.

ಸಮಾರಂಭದಲ್ಲಿ ಒಟ್ಟು 576 ವಿದ್ಯಾರ್ಥಿಗಳು ಪದವಿ ಪಡೆದರು. ಈ ಪೈಕಿ ಮೋನಿಷಾ ನಾಲ್ಕು ಹಾಗೂ ಹರ್ಷಿತಾ ಎರಡು ಸೇರಿ 34 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪ ನಿರ್ದೇಶಕ ಡಾ. ಬಿ. ಕೆ. ಜಯಣ್ಣ, ಡೀನ್ ಈಶ್ವರ್ ಎನ್. ಮಾನೆ, ಪ್ರಾಂಶುಪಾಲ ಡಾ. ಎಸ್.ವೈ. ಕುಲಕರ್ಣಿ ಉಪಸ್ಥಿತರಿದ್ದರು.

> ವಿದ್ಯಾರ್ಥಿಗಳು ಇಂಜಿನಿಯರಿಂಗ್ ಪದವಿ ಜತೆಗೆ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಜ್ಞಾನಕ್ಕಾಗಿ ಓದಬೇಕು. ಕಂಪನಿಯು ನಿಮ್ಮ ಅಂಕಗಳ ಜತೆಗೆ ಪ್ರತಿಭೆಗೆ ಹೆಚ್ಚು ಬೆಲೆ ನೀಡಲಿದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.
>
> **| ನಾರಾಯಣ ರಾವ್ ಆರ್. ಮಾನೆ**
> ಬಿಎನ್‌ಎಂ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ